ಗದಗ್ ಕ್ಷೇತ್ರದ ಹುಲಕೋಟಿ ಗ್ರಾಮದಲ್ಲಿ ಕಾಲೇಜು ಪ್ರಾರಂಭಿಸುವ ಪ್ರಸ್ತಾವನೆ

1548 (1967) ಶ್ರೀ ಡಿ.ಆರ್. ಪಾಟೀಲ್ (ಗದಗ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗದಗ ವಿಧಾನಸಭಾ ಕ್ಷೇತ್ರದ ಹುಲಕೋಟಿ ಗ್ರಾಮದಲ್ಲಿ ಸರ್ಕಾರಿ ಪದವಿಪೂರ್ವ ಹಾಗೂ ಪದವಿ ಮಹಿಳಾ ಕಾಲೇಜು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದ್ದು, ಅದು ಮುಂದಿನ ಶೈಷಣಿಕ ವರ್ಷದಲ್ಲಿ ಕಾರ್ಯಗತಗೊಳ್ಳುವುದೆ;

ಆ) ಈ ಕಾಲೇಜಿನಲ್ಲಿ ಸರ್ಕಾರ ಬೋಧಿಸಬೇಕೆನ್ನುವ ಶೈಕ್ಷಣಿಕ ವಿಭಾಗಗಳು ಹಾಗೂ ವಿಷಯಗಳು ಯಾವುವು;

ಇ) ಇದಕ್ಕೆ ಬೇಕಾಗುವ ಭೂಮಿ ಎಷ್ಟು?

ಡಾ॥ ಜಿ. ಪರಮೇಶ್ವರ (ಉನ್ನತ ಶಿಕ್ಷಣ ಸಚಿವರು) :

ಅ) ಸಧ್ಯಕ್ಕೆ ಇಲ್ಲ

ಆ) ಮತ್ತು ಇ) ಅನ್ವಹಿಸುವುದಿಲ್ಲ

ಶಿಕ್ಷಣ ರಂಗದಲ್ಲಿ ಮಾಹಿತಿ ತಂತ್ರಜ್ಞಾನ

1549 (1968) ಶ್ರೀ ಡಿ.ಆರ್. ಪಾಟೀಲ್ (ಗದಗ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಾಥಮಿಕ, ಮಾಧ್ಯಮಿಕ ಶಿಕ್ಷರ ರಂಗದಲ್ಲಿ ಮಾಹಿತಿ ತಂತ್ರಜ್ಞಾನದ ಎಲ್ಲಾ ಸೌಲಭ್ಯಗಳನ್ನು ಉಪಯೋಗಿಸಿ, ಶೈಕ್ಷಣಿಕ ಪಾಠಗಳನ್ನು ಮಾಡಿಸಲು ಬರುವುದೇ; ಇದರಿಂದ ಶಿಕ್ಷಕರಿಗೆ ಕೊಡುವ ಸಂಬಳದ ಹೊರೆಯನ್ನು ಕಡಿಮೆ ಮಾಡಿಕೊಳ್ಳಲು ಸಾಧ್ಯವೇ?

ಆ) ರಾಜ್ಯದ ಮೂಲೆ ಮೂಲೆಗಳಲ್ಲಿರುವ ಗ್ರಾಮೀಣ ಪ್ರದೇಶದಲ್ಲಿನ ವಿಧ್ಯಾರ್ಥಿಗಳಿಗೂ ಸಹ ಉತ್ತಮ ಗುಣಮಟ್ಟದ ಶಿಕ್ಷಣ ಕೊಡಲು ಸಾಧ್ಯವಿಲ್ಲವೇ?

ಇ) ಇದು ಸಾಧ್ಯವಿದ್ದರೆ, ಈ ವ್ಯವಸ್ಥೆ ಮಂಡಿಸಲು ಸರ್ಕಾರಕ್ಕೆ ಬೀಳುವ ಹಣಕಾಸಿನ ಹೊರೆ ಎಷ್ಟು?

ಈ) ವಿಶ್ವದಲ್ಲಿಯೇ ಅತ್ಯುನ್ನತ ಮಟ್ಟದ ಮಾಹಿತಿ ತಂತ್ರಜ್ಞಾನಗಳನ್ನು ಹೊಂದಿದ ಕರ್ನಾಟಕಕ್ಕೆ ಈ ವಿಷಯದಲ್ಲಿ ರಾಷ್ಟ್ರಕ್ಕೆ ಮೇಲ್ಪಂಕ್ತಿ ಹಾಕಲು ನಮ್ಮ ಸರ್ಕಾರ ಪ್ರಯತ್ನಿಸುವುದೇ?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ಮಾಹಿತಿ ತಂತ್ರಜ್ಞಾನ ಉಪಯೋಗಿಸಿಕೊಂಡು ಪ್ರಾಥಮಿಕ ಮತ್ತು ಪ್ರೌಢ ಹಂತದಲ್ಲಿ ಶಿಕ್ಷಣ ನೀಡಿಸುವುದು ಸಾಧ್ಯ. ಆದರೆ ಇದರಿಂದ ಶಿಕ್ಷಕರಿಗೆ ನೀಡುವ ಸಂಬಳದ ಹೊರೆ ಕಡಿಮೆಯಾಗುವಂತಹ ಸಾಧ್ಯತೆ ಕಡಿಮೆಯಾಗುವ ಹಂತ ಇನ್ನೂ ಬಂದಿಲ್ಲ.

ಆ) ಸಾಧ್ಯವಿದೆ. ಈ ನಿಟ್ಟಿನಲ್ಲಿ ಸರ್ಕಾರವು ಸಹ ಉತ್ತಮ ಗುಣಮಟ್ಟ ಶಿಕ್ಷಣ ನೀಡಲು ಬದ್ಧವಾಗಿದೆ.

ಇ) ತಂತ್ರಜ್ಞಾನ ಶಿಕ್ಷಣವು ಒಂದು ಪ್ರಗತಿಪರ ವಿಚಾರವಾಗಿದ್ದು ನಿರ್ದಿಷ್ಟವಾಗಿ ಆರ್ಥಿಕ ಹೊರೆಯನ್ನು ಅಂದಾಜು ಮಾಡಲು ಕಷ್ಟಸಾಧ್ಯ. ಈಗ ಮಂಗಳೂರು ಮತ್ತು ಉಡುಪಿ ಜಿಲ್ಲೆಗಳನ್ನ ಪ್ರಧಾನ ಮಂತ್ರಿಗಳ ಪೈಲಟ್ ಪ್ರಾಜೆಕ್ಟ್ ತಂತ್ರಜ್ಞಾನ ಶಿಕ್ಷಣದ ಅನುಷ್ಠಾನದ ನಂತರ ಬಹುಷ ಆರ್ಥಿಕ ಹೊರೆಯ ಅಂದಾಜುಮಾಡಬಹುದು.

ಈ) ಪ್ರಯತ್ನಿಸಲಾಗುವುದು. ಸರ್ಕಾರ ಈ ನಿಟ್ಟಿನಲ್ಲಿ ಕಾರ್ಯ ಪ್ರಾರಂಭಿಸಿದೆ.

ಅನಕ್ಷರಸ್ಥ ಗ್ರಾಮ ಪಂಚಾಯಿತಿ ಸದಸ್ಯರು

1551 (1973) ಶ್ರೀ ಪ್ರಕಾಶ್ ಖಂಡ್ರೆ (ಭಾಲ್ಕಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅನಕ್ಷರಸ್ಥ ಗ್ರಾಮ ಪಂಚಾಯತಿ ಸದಸ್ಯರುಗಳು, ಅಧ್ಯಕ್ಷರು ಮತ್ತ ಉಪಾಧ್ಯಕ್ಷರುಗಳ ಚುನಾವಣೆ ಸಮಯದಲ್ಲಿ ಮತ ಚಲಾಯಿಸಲು ಈಗ ಸರ್ಕಾರ ಯಾವ ರೀ ವ್ಯವಸ್ಥೆ ಮಾಡಿದೆ;

ಆ) ಈಗಿನ ವ್ಯವಸ್ಥೆಯ ಪ್ರಕಾರ ಅನಕ್ಷರಸ್ಥಗ್ರಾಮ ಪಂಚಾಯತಿಯ ಸದಸ್ಯರು ಮತ ಚಲಾವಣೆ ಮಾಡುವ ಸಂದರ್ಭದಲ್ಲಿ ಸಮಸ್ಯೆಗಳನ್ನು ಎದುರಿಸುತ್ತಿರುವುದು ಸರ್ಕಾರದ ಗಮನಕ್ಕ ಬಂದಿದೆಯೇ?

ಇ) ಹಾಗಿದ್ದಲ್ಲಿ, ಈಗ ಇವರಿಗೆ ಇರುವ ಮತಚಲಾವಣೆಯ ಸಮಸ್ಯೆಯನ್ನು ಪರಿಹರಿಸಲ ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳಲಿದೆ;

ಈ) ಈಗ ಇರುವ ಮತ ಚಲಾವಣೆ ವ್ಯವಸ್ಥೆಯನ್ನು ಬದಲಾಯಿಸಲಾಗುವುದೇ?

ಉ) ಇಲ್ಲವಾದಲ್ಲಿ ಕಾರಣಗಳೇನು?

ಶ್ರೀ ಎಂ.ವೈ ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು) :

ಅ) ಗ್ರಾಮ ಪಂಚಾಯತ್ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಚುನಾವಣೆ ನಿಯಮಗಳು 1995 ನಿಯಮ 8(11) (ಎ)ರಲ್ಲಿ ಗ್ರಾಮ ಪಂಚಾಯತಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣ ಸಂದರ್ಭದಲ್ಲಿ ಗ್ರಾಮ ಪಂಚಾಯತ್ ಸದಸ್ಯರುಗಳು ಅನಕ್ಷರಸ್ಥರಾಗಿದ್ದಲ್ಲಿ ಮತ್ತು ಮತಪತ್ರ ಮೇಲೆ ಕ್ರಾಸ್ ಗುರುತು ಮಾಡಲು ಸಾಧ್ಯವಾಗದಿದ್ದರೆ, ಚುನಾವಣೆಗೆ ಗೊತ್ತುಪಡಿಸಿರ ಅಧಿಕಾ ಮತದಾರನ ಇಚ್ಛೆಗನುಸಾರ ಮತಪತ್ರದ ಮೇಲೆ ಮತವನ್ನು ದಾಖಲು ಮಾಡುವ ವ್ಯವಸ್ಥೆಯನ ಸರ್ಕಾರ ಮಾಡಿದೆ.

ಆ) ಮೇಲಿನ ವಿವರಣೆಯಂತೆ, ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಈ ಸಮಸ್ಯೆ ನಿವಾರಿಸಲು ನಿಯಮಗಳನ್ನು ರಚಿಸಿದ್ದು, ಉತ್ತರ (ಆ)ರಲ್ಲಿ ವಿವರ ನೀಡಿರ

ಈ) ಸದ್ಯಕ್ಕೆ ಅಂತಹ ಪ್ರಸ್ತಾಪ ಸರ್ಕಾರದ ಮುಂದಿರುವುದಿಲ್ಲ.